# ಹೊಸ ವ್ಯಾಕರಣದ ವಿಲನ್!



■ ಸುಮಲತಾ ಎನ್.

‘ಸಪ್ತಸಾಗರದಾಚೆ ಎಲ್ಲೋ’, ‘ಕೋಟಿ’ ಸಿನಿಮಾಗಳಲ್ಲಿ ಖಳನಾಯಕನಾಗಿ ನಟಿಸಿ, ತಮ್ಮ ವಿಭಿನ್ನ ಶೈಲಿಯಿಂದ ‘ವಿಲನ್’ ಪಾತ್ರಕ್ಕೆ ಹೊಸ ‘ಮ್ಯಾನರಿಸಂ’ ಕೊಟ್ಟವರು ನಟ ಹಾಗೂ ನಿರ್ದೇಶಕ ರಮೇಶ್ ಇಂದಿರಾ. ನಟನೆಯಲ್ಲಿ, ಅದಕ್ಕಿಂತ ಮುಖ್ಯವಾಗಿ ನಿರ್ದೇಶನದಲ್ಲಿ ಅಚ್ಚರಿಯ ಹಾದಿಗಳನ್ನು ಅನ್ವೇಷಿಸುವ ಹಂಬಲದಲ್ಲಿರುವ ಅವರು, ಮನರಂಜನಾ ಕ್ಷೇತ್ರದಲ್ಲಿನ ತಮ್ಮ ಅನುಭವಗಳನ್ನೇ ಪಾಠವಾಗಿಸಿಕೊಂಡವರು. ಅಂಥ ಕೆಲವು ಅನುಭವಗಳನ್ನು ‘ಸುಧಾ’ದೊಂದಿಗೆ ಹಂಚಿಕೊಂಡಿದ್ದಾರೆ.

◆ **ಸದ್ಯ ‘ಖಳನಾಯಕ’ನಾಗಿ ಮಿಂಚುತ್ತಿರುವಿರಿ. ಆ ‘ಮ್ಯಾನರಿಸಂ’ ಮೈಗೂಡಿದ್ದು ಹೇಗೆ?**

ನಿರ್ದೇಶಕರು ಏನು ಹೇಳುತ್ತಾರೋ ಅದನ್ನು ಮಾಡಿದ್ದೇನಷ್ಟೆ. ಸುಮಾರು 20 ವರ್ಷಗಳಿಂದ ನಿರ್ದೇಶನ ವಿಭಾಗದಲ್ಲಿರುವುದರಿಂದ ನಟರಿಗೆ ಹೇಳಿಕೊಟ್ಟು ಪಾತ್ರದ ಗ್ರಹಿಕೆ ಸುಲಭವಾಗಿರುತ್ತದೆ. ನಿರ್ದೇಶಕರು ಪಾತ್ರ ಹಾಗೂ ಹಿನ್ನೆಲೆ ಹೇಳಿದ ತಕ್ಷಣ ಸಣ್ಣ ಆಲೋಚನೆ ಬಂದಿರುತ್ತದೆ. ಅದಕ್ಕೆ ಓದಿದ್ದು, ಕೇಳಿದ್ದು, ಕಲ್ಪನೆ ಮಾಡಿಕೊಂಡಿದ್ದು, ಸ್ವಾನುಭವ ಎಲ್ಲ ಸೇರಿ ಪಾತ್ರ ರೂಪುಗೊಳ್ಳುತ್ತದೆ. ನಾವೆಲ್ಲ ಜೀವನದಲ್ಲಿ ಯಾರ್‍ಯಾರನ್ನೋ ನೋಡಿರುತ್ತೇವೆ, ಭೇಟಿ ಮಾಡಿರುತ್ತೇವೆ. ನಮಗೆ ಗೊತ್ತಿಲ್ಲದೇ ಸುಪ್ತ ಮನಸ್ಸಿನಲ್ಲಿ ಅದು ದಾಖಲಾಗಿರುತ್ತದೆ. ಅವಶ್ಯಕತೆ ಎದುರಾದಾಗ ಹೀಗೆ ತಾನಾಗೇ ಹೊರಹೊಮ್ಮುತ್ತದೆ.

◆ **ಖಳನಾಯಕನ ಪಾತ್ರದ ಟ್ರೀಟ್‌ಮೆಂಟ್ ಪ್ರಸ್ತುತ ಹೇಗಿದೆ ಅನ್ನಿಸುತ್ತದೆ?**

ಮೊದಲು ಖಳನಾಯಕ ಖಳನಾಯಕನಷ್ಟೇ ಆಗಿದ್ದ. ಆ ಪಾತ್ರದ ಉದ್ದೇಶಗಳು ಕೆಲವು ಸಿನಿಮಾಗಳಲ್ಲಿ ಸ್ಪಷ್ಟವಾಗಿರುತ್ತಿದ್ದವು, ಕೆಲವಲ್ಲಿ ಇರುತ್ತಿರಲಿಲ್ಲ. ನಾಯಕನಿಗೆ ಒಬ್ಬ ಪ್ರತಿನಾಯಕ ಬೇಕು, ನಟಿಯನ್ನು ಕಟ್ಟಿ ಹಾಕೋಕೆ ಖಳನಾಯಕ ಬೇಕು, ನಾಯಕನ ಇಮೇಜ್ ಹೆಚ್ಚಿಸಲು ಖಳನಾಯಕ ಬೇಕು ಅನ್ನೋ ರೀತಿಯಲ್ಲಿ ಇಂಥ ಪಾತ್ರಗಳು ಹುಟ್ಟಿಕೊಂಡಿದ್ದವು. ಆದರೆ ಈಗ ಚಿತ್ರಣ ಬದಲಾಗಿದೆ. ಖಳನಾಯಕನ ಪಾತ್ರಕ್ಕೆ ಪೋಷಣೆ, ವಿವರಣೆ, ಗಟ್ಟಿತನ ಕೊಡುತ್ತಿದ್ದಾರೆ. ಈಗ ಎಲ್ಲ ಮಾಧ್ಯಮಗಳಲ್ಲಿ, ಎಲ್ಲ ಭಾಷೆಯ, ಎಲ್ಲ ರೀತಿಯ ಸಿನಿಮಾಗಳನ್ನೂ ನೋಡುವವರು ಹೆಚ್ಚಿದ್ದಾರೆ. ಹೀಗಾಗಿ ಬರವಣಿಗೆಯಲ್ಲಿ ಗಟ್ಟಿತನ ಇರಲೇಬೇಕು. ಇಲ್ಲದಿದ್ದರೆ ಜನ ಸ್ವೀಕರಿಸುವುದಿಲ್ಲ. ಎಲ್ಲ ಪಾತ್ರ ಪೋಷಣೆಯೂ ಚೆನ್ನಾಗಿರಲೇಬೇಕು. ಹಾಗೆಯೇ ಖಳ ಪಾತ್ರವನ್ನೂ ಚೆನ್ನಾಗಿಯೇ ಮಾಡಬೇಕು, ಹೇಗ್ಹೇಗೋ ಸುಮ್ಮನೆ ತೋರಿಸಬಾರದು ಎಂಬುದು ನಿರ್ದೇಶಕರ ಅಭಿಪ್ರಾಯ.

10 ವರ್ಷದ ಹಿಂದಿನ ಕಮರ್ಷಿಯಲ್ ಸಿನಿಮಾಗಳನ್ನೇ ನೋಡಿ, ವಿಲನ್ ಎಂದರೆ ಅವನು ಯಾವಾಗಲೂ ಸಿಗರೇಟ್ ಸೇದುತ್ತಿರುತ್ತಾನೆ, ಕುಡಿಯುತ್ತಿರುತ್ತಾನೆ, ಅರೆಬರೆ ಬಟ್ಟೆ ತೊಟ್ಟ ಹುಡುಗಿಯರನ್ನು ತೊಡೆ ಮೇಲೆ ಕೂರಿಸಿಕೊಂಡಿರುತ್ತಾನೆ... ಇಂಥ ಚಿತ್ರಣಗಳೇ ಕಾಣುತ್ತಿದ್ದವು. ಈಗ ಆ ಚಿತ್ರಣ ಕದಲಿದೆ. ವಿಲನ್ ಪಾತ್ರದ ಆಯಾಮ ಬದಲಾಗಿದೆ. ಸಹಜತೆ ಹಾಗೂ ಕ್ರೌರ್ಯ ಎರಡನ್ನೂ ಮಿಳಿತ ಮಾಡಿಕೊಂಡಿದ್ದಾರೆ ಅನಿಸುತ್ತಿದೆ.

◆ **ಇನ್ನೂ ಯಾವ್ಯಾವ ಪಾತ್ರಗಳಲ್ಲಿ ನಿಮ್ಮನ್ನು ನೋಡಿಕೊಳ್ಳಬೇಕು ಎನಿಸಿದೆ?**

ಎಂಥ ಪಾತ್ರವನ್ನೂ ಮಾಡಬಲ್ಲ ಚೈತನ್ಯ, ಶಕ್ತಿಯನ್ನು ಕಲಾವಿದನಾದವನು ರೂಢಿಸಿಕೊಳ್ಳಬೇಕು. ಒಂದೇ ಪಾತ್ರದ ಹಿಂದೆ ಬೀಳಬಾರದು ಅಥವಾ ಅದೇ ಪಾತ್ರಕ್ಕೆ ಸೀಮಿತಗೊಳ್ಳಬಾರದು. ಒಂದು ಹರವಿನಲ್ಲಿ ನೋಡಿದರೆ, ಎಲ್ಲ ಥರದ ಪಾತ್ರವೂ ಒಬ್ಬ ಕಲಾವಿದನಿಗೆ ಬೇಕು. ಹಾಗಾಗಿ ಎಲ್ಲ ಬಗೆಯ ಪಾತ್ರಗಳನ್ನು ಮಾಡುವ ಆಸಕ್ತಿಯಿದೆ. ನನ್ನನ್ನು ನಂಬಿ ಆ ಪಾತ್ರಗಳನ್ನು ಕೊಡಬೇಕು.

◆ **ನಟನೆ– ನಿರ್ದೇಶನ; ಇವೆರಡರಲ್ಲಿ ನಿಮ್ಮ ಆದ್ಯತೆ?**

ನಟನೆ ನನ್ನ ಎರಡನೇ ಆದ್ಯತೆ. ನನ್ನ ಮೊದಲ ಆದ್ಯತೆ ಎಂದಿಗೂ ಬರವಣಿಗೆ ಮತ್ತು ನಿರ್ದೇಶನ. ಒಂದು ಸಿನಿಮಾ ಕೈಗೆತ್ತಿಕೊಂಡರೆ, ಬರವಣಿಗೆಗೇ ಆರು ತಿಂಗಳು ಹಿಡಿಯುತ್ತದೆ. ಅದಾದ ಮೇಲೆ ಪ್ರಿಪ್ರೊಡಕ್ಷನ್ – ಇತರೆ ಕೆಲಸಗಳು ಇರುತ್ತವೆ. ಈ ಮಧ್ಯದಲ್ಲಿ ಬಿಡುವಿದ್ದಾಗ ನಟನೆ ಮಾಡಬೇಕು.

◆ **ನಿರ್ದೇಶಕನಾಗಿ ನಿಮ್ಮ ಅನುಭವಗಳು?**

ಮನರಂಜನಾ ಕ್ಷೇತ್ರಕ್ಕೆ ಬಂದು ಹತ್ತಿರತ್ತಿರ 20 ವರ್ಷಗಳು ಕಳೆಯುತ್ತಿವೆ. ಕಿರುತೆರೆಯಲ್ಲಿ ಸಹಾಯಕ ನಿರ್ದೇಶಕನಾಗಿ ಬಂದವನು ಡೈಲಾಗ್ ರೈಟರ್ ಆದೆ, ನಿರ್ದೇಶಕನಾದೆ. ಟಿ.ಎನ್. ಸೀತಾರಾಂ, ಸೇತುರಾಂ ಅವರ ಬಳಿ ಕೆಲಸ ಮಾಡಿದ್ದೇನೆ. ಇನ್ನೊಂದಷ್ಟು ದಿನ ಮದ್ರಾಸ್‌ಗೂ ಹೋಗಿದ್ದೆ, ಅಲ್ಲೇನೂ ಆಗದೆ ವಾಪಸ್ ಬಂದೆ. ಆಮೇಲೆ ಶ್ರುತಿ ನಾಯ್ಡು ಪ್ರೊಡಕ್ಷನ್‌ನಲ್ಲಿ ಕಳೆದ 15 ವರ್ಷಗಳಿಂದ ಕ್ರಿಯೇಟಿವ್ ಹೆಡ್ ಹಾಗೂ ಡೈರೆಕ್ಟರ್ ಆಗಿದ್ದೇನೆ. ಚಿತ್ರಕಥೆ, ಸಂಭಾಷಣೆಯ ವಿಭಾಗಗಳಲ್ಲಿ ತೊಡಗಿಕೊಂಡಿದ್ದೇನೆ. ‘ಪ್ರೀಮಿಯರ್ ಪದ್ಮಿನಿ’ ಎಂಬ ಸಿನಿಮಾ ನಿರ್ದೇಶನವನ್ನೂ ಮಾಡಿದೆ. ಈಗ ಎರಡನೇ ಸಿನಿಮಾ ಶುರು ಮಾಡಿದ್ದೇನೆ. ಬರವಣಿಗೆ ಕೆಲಸ ಮುಗಿದಿದೆ. ನಾಲ್ಕು ದಿನ ಶೂಟಿಂಗ್ ಆಗಿದೆ. ಕಥೆ, ಚಿತ್ರಕಥೆ, ಪಾತ್ರಗಳ ಆಯ್ಕೆ ಮುಗಿದಿದೆ. ಶೀಘ್ರವೇ ಶೂಟಿಂಗ್ ಪುನರಾರಂಭ